ರಚಿಯ ನಿಜವಾದ ಹೆಸರೇನೆಂದು ನನಗೆ ನೆನಪಿಲ್ಲ. ಅವನ ರೂಪವೂ ಈಗ ಅಸ್ಪಷ್ಟವಾಗಿದೆ. ನನ್ನ ತೊಡೆಯ ಮೇಲೆ ಅವನು ತಲೆಯಿಟ್ಟು ಸಣ್ಣಗೆ ಗೊರಕೆ ಹೊಡೆದಾಗ ಅನುಭವಿಸಿದ ಒಂದು ಬಗೆಯ ಗಡಸುತನ ಅಥವಾ ಅವನ ಪುರುಷತ್ವ ಮಾತ್ರ ಈಗ ನನ್ನ ನೆನಪಿನಲ್ಲಿ ಉಳಿದಿದೆ. ಅವನ ಗುಂಗುರು ಕೂದಲಿನಲ್ಲಿ ಬೆರಳಾಡಿಸಬೇಕೆಂಬ ನನ್ನ ಬಯಕೆಯನ್ನು ನಾವಿಬ್ಬರು, ಜೊತೆಗೆ ಕಾಲೊನಿಯ ಕಾವಲುಗಾರನ ಮಗ. ಕಾಲೊನಿಯಲ್ಲಿದ್ದ ನೀರಿನ ಗುಂಡಿಯ ಸುತ್ತ ಓಡುವುದು ಮತ್ತು ಒಬ್ಬರಿಗೊಬ್ಬರು ಚೆಂಡಿನಿಂದ ಹೊಡೆದುಕೊಳ್ಳುವ ಆಟವನ್ನು ಆಡುತ್ತಿದ್ದೆವು. ಯಾರಿಗೆ ಚೆಂಡು ಸಿಗುತ್ತದೆಯೋ ಅವರು ಪೂರ್ತಿ ಓಟದ ದಿಕ್ಕನ್ನೇ ಬದಲಿಸುವಂತೆ ಮತ್ತೊಬ್ಬರ ಕಡೆಗೆ ಚೆಂಡನ್ನು ಒಗೆಯುಬೇಕಿತ್ತು. ಆತನು ದಿಕ್ಕು ಬದಲಾಯಿಸಿ ಓಡುವುದೋ ಅಥವಾ ಚೆಂಡನ್ನು ಹಿಡಿಯುವುದೋ ಮಾಡದಿದ್ದರೆ ಔಟಾಗುತ್ತಿದ್ದ. ನನ್ನ ಕೈಗೊಮ್ಮೆ ಚೆಂಡು ಸಿಕ್ಕು ತಕ್ಷಣ ರಂಜಿತ್ ಕಡೆಗೆ ಒಗೆದಾಗ, ಅವನು ಎಡವಿ ನೀರಿನ ಗುಂಡಿಯಲ್ಲಿ ಬಿದ್ದಿದ್ದ. ಅವನ ಕೈ ಮುರಿದಿತ್ತು.

ನಮ್ಮಿಬ್ಬರ ಅಮ್ಮಂದಿರು ಈ ವಿಷಯವಾಗಿ ಮಾರಾಮಾರಿ ಜಗಳವಾಡಿದ್ದರು. ಅದು ಅಪಘಾತವೆಂದೂ, ಆಗೊಮ್ಮೆ ಈಗೊಮ್ಮೆ ಸಂಭವಿಸುತ್ತದೆಂದೂ ನಮ್ಮಮ್ಮ ವಾದಿಸಿದರೆ, ತನ್ನ ಮಗನನ್ನು ಗಾಯಗೊಳಿಸಲೆಂದೇ ಮಾಡಿದ ಕೃತ್ಯವದೆಂದು ಅವರಮ್ಮ ವಾದಿಸಿದ್ದರು. ಕೆಟ್ಟ ಹುಡುಗರ ಸಹವಾಸ ಮಾಡಿದವನು(ಅಂದರೆ ಕಾವಲುಗಾರನ ಮಗನ ಜೊತೆಗೆ ಸ್ನೇಹ